<u>ದಿನಾಂಕ:27.09.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಶ್ರೀ ಜಿ.ಎಸ್., 1 ನೇ ಪ್ರತಿವಾದಿ ಪರ ವಕೀಲರಿಂದ</u>

2. ನನ್ನ ತಂದೆ ಮತ್ತು 2 ನೇ ವಾದಿ ರಂಗಸ್ವಾಮಿಯ ತಂದೆ ಇಬ್ಬರು ಚಿಕ್ಕಪ್ಪ, ದೊಡ್ಡಪ್ಪನ ಮಕ್ಕಳುಗಳು ಎಂದರೆ ಸರಿ. ನನಗೂ ಮತ್ತು ಮೃತ 1 ನೇ ಪ್ರತಿವಾದಿ ಹೆಂಡತಿ ಶಿಲ್ಪ ಇವರ ತಂದೆಯ ಮಧ್ಯೆ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ವಾದಿಯರು ಮತ್ತು ಮೃತ 1 ನೇ ಪ್ರತಿವಾದಿ ಎಲ್ಲರೂ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿಯಲ್ಲ. 2 ನೇ ವಾದಿ ರಂಗಸ್ವಾಮಿ ವ್ಯವಸಾಯ ಮಾಡುತ್ತಾನೆ. 2 ನೇ ವಾದಿ ರಂಗಸ್ವಾಮಿಯ ಹೆಂಡತಿ ಗೀತಮ್ಮ ಟಿ.ಎನ್. ಮೇಲುಕೋಟೆಯಲ್ಲಿ ಅಂಗನವಾಡಿ ಶಿಕ್ಷಕಿಯಾಗಿರುತ್ತಾಳೆ. ಟಿ.ಎನ್. ಕೋಟೆಯಿಂದ ಮೇಲುಕೋಟೆಗೆ ಸುಮಾರು 1 ವರೆ ಯಿಂದ 2 ಕಿ.ಮೀಟರ್ ಆಗುತ್ತದೆ. 2 ನೇ ವಾದಿ ರಂಗಸ್ವಾಮಿ ಮತ್ತು ಅವರ ಹೆಂಡತಿ ಗೀತಮ್ಮ ಪರಸ್ಪರ ಪ್ರೀತಿಸಿ ಮದುವೆಯಾಗಿರುತ್ತಾರೆ ಎಂದರೆ ಸರಿ. ಅವರು ಮದುವೆಯಾಗಿ ಸುಮಾರು 30 ರಿಂದ 35 ವರ್ಷಗಳಾಗಿರುತ್ತವೆ.



3. ಮದುವೆಯಾದಗಿನಿಂದ 2 ನೇ ವಾದಿ ರಂಗಸ್ವಾಮಿ ಮತ್ತು ಅವರ ಹೆಂಡತಿ ಮೇಲುಕೋಟೆಯಲ್ಲಿಯೇ ಖಾಯಂ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಟಿ.ಎನ್.ಕೋಟೆಗೆ ಹೋಗಿ ಬಂದು ಮಾಡುತ್ತಾರೆ ಎಂದು ನುಡಿಯುತ್ತಾರೆ. 2 ನೇ ವಾದಿ ರಂಗಸ್ವಾಮಿ ಪ್ರೀತಿಸಿ ಮದುವೆಯಾಗಿದ್ದರಿಂದ 1997 ರಲ್ಲಿಯೇ ತನ್ನ ಭಾಗವನ್ನು ತೆಗೆದುಕೊಂಡು ಪ್ರತ್ಯೇಕವಾಗಿ ಇರುತ್ತಾನೆ ಎಂದರೆ ಸರಿಯಲ್ಲ. 2 ನೇ ವಾದಿಗೆ ಕುರಿ ಮತ್ತು ಮೇಕೆಗಳು ಇರುತ್ತವೆ ಎಂದರೆ ಸರಿಯಲ್ಲ. 1 ನೇ ವಾದಿ ನಾಗರತ್ನಮ್ಮನಿಗೆ ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳಿರುತ್ತಾರೆ. ರುದ್ರಪ್ಪ ಮೃತನಾಗಿ ಎಷ್ಟು ವರ್ಷಗಳಾಗಿರುತ್ತದೆ ಅಂತ ನನಗೆ ಗೊತ್ತಿಲ್ಲ. ಇಬ್ಬರು ಹೆಣ್ಣು ಮಕ್ಕಳಾದ ಅಂದರೆ 2 ಮತ್ತು 3 ನೇ ಪ್ರತಿವಾದಿಯರ ಮದುವೆ ಯಾವಾಗ ಆಗಿರುತ್ತದೆ ಅಂತ ನನಗೆ ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿಯ ಗಂಡನ ಹೆಸರು ನಾಗೇಂದ್ರ ಮತ್ತು 3 ನೇ ಪ್ರತಿವಾದಿಯ ಗಂಡನ ಹೆಸರು ಹನುಮಂತರಾಯಪ್ಪ. 2 ನೇ ಪ್ರತಿವಾದಿ ಅನಿತ ನ್ಯಾಯಾಲಯದಲ್ಲಿ ನೌಕರಿಯಲ್ಲಿದ್ದು, 3 ನೇ ಪ್ರತಿವಾದಿ ಭಾಗ್ಯಲಕ್ಷ್ಮೀ ಮನೆಯಲ್ಲಿ ಇರುತ್ತಾಳೆ. 2 ಮತ್ತು 3 ನೇ ಪ್ರತಿವಾದಿಯರು ಮದುವೆಯಾದಗಿನಿಂದ ಬೇರೆ ಇದ್ದು ಅವರು ತಮ್ಮ ಭಾಗದ ಪ್ರತಿಫಲವಾಗಿ ಬಂಗಾರವನ್ನು ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ವಾದಿಯರ ಮತ್ತು 1 ನೇ ಪ್ರತಿವಾದಿ ಪೂರ್ವಜರ ಆಸ್ತಿ ಯಾವುದು ಅಂತ

ಹೇಳಬಹುದಾ ಎಂದರೆ ಸಾಕ್ಷಿಯು ಸರ್ವೆ ನಂಬರ್ 38/ಪಿ14, 14 ಗುಂಟೆ, ಸರ್ವೆ ನಂಬರ್ 38/ಪಿ15, 39 ಗುಂಟೆ ಮತ್ತು ಸರ್ವೆ ನಂಬರ್ 38/ಪಿ13 ನೇದ್ದರ ವಿಸ್ತೀರ್ಣ ಹೇಳಲು ನನಗೆ ಬರುವುದಿಲ್ಲ. ಮೇಲಿನ ಜಮೀನುಗಳಿಂದ ಬರುತ್ತಿದ್ದ ಆದಾಯ ಅವರಿಗೆ ಜೀವನ ಸಾಗಿಸಲು ಸಾಕಾಗುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೇಲಿನ ಜಮೀನುಗಳಿಂದ ಯಾವುದೇ ಆದಾಯ ಬರದೇ ಇದ್ದುದರಿಂದ ವಾದಿಯರು ಮತ್ತು 1 ನೇ ಪ್ರತಿವಾದಿ ಎಲ್ಲರೂ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿಯಲ್ಲ.

5. 1 ನೇ ಪ್ರತಿವಾದಿ ಮೃತ ಶಶಿಕುಮಾರ್ ಇವರ ಹೆಂಡತಿ ಶಿಲ್ಪ ಇವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅವರು ನಮ್ಮ ಊರಿನವರಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಶಿಲ್ಪ ಇವರ ತಂದೆಯ ಹೆಸರು ಪುಟ್ಟಲಿಂಗಣ್ಣ ಎಂದರೆ ಸರಿ. ಶಿಲ್ಪ ಇವರ ತಂದೆ ಪುಟ್ಟಲಿಂಗಣ್ಣ ಇವರೇ 4 ನೇ ದಾವಾ ಆಸ್ತಿಯನ್ನು ಮೃತ 1 ನೇ ಪ್ರತಿವಾದಿ ಶಶಿಕುಮಾರ್ ಗೆ ಕ್ರಯ ಮಾಡಿಸಿಕೊಟ್ಟು ನಂತರ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. 4 ನೇ ದಾವಾ ಆಸ್ತಿಯು ಮೃತ 1 ನೇ ಪ್ರತಿವಾದಿ ಶಶಿಕುಮಾರ್ ಇವರ ಸ್ವಯಾರ್ಜಿತ ಆಸ್ತಿ ಎಂದರೆ ಸಾಕ್ಷಿಯು ರುದ್ರಪ್ಪ ಮೇಷ್ಟ್ರು ಕೊಡಿಸಿರುತ್ತಾರೆ ಎಂದು ನುಡಿಯುತ್ತಾರೆ.



6. ರುದ್ರಪ್ಪ ಇವರಿಗೆ ಕೆಲಸ ಯಾವಾಗಿ ಸಿಕ್ಕಿತ್ತು ಮತ್ತು ಆತ ಎಲ್ಲೆಲ್ಲಿ ಕೆಲಸ ಮಾಡಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ರುದ್ರಪ್ಪ ಮೇಷ್ಟ್ರು ಆಗಿರಲಿಲ್ಲ ಎಂದರೆ ಸರಿಯಲ್ಲ. 4 ನೇ ದಾವಾ ಆಸ್ತಿಯನ್ನು ರುದ್ರಪ್ಪ 1 ನೇ ಪ್ರತಿವಾದಿ ಶಶಿಕುಮಾರ್ ಗೆ ಕ್ರಯ ಮಾಡಿಸಿಕೊಟ್ಟಿರುತ್ತಾನೆ ಅಂತ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ದಾವಾ ಆಸ್ತಿಯ ಕ್ರಯ ಪತ್ರದ ವ್ಯವಹಾರಕ್ಕೆ ನಾನು ಭಾಗವಹಿಸಿರುವುದಿಲ್ಲ ಮತ್ತು ಅದರ ವಿಚಾರ ನನಗೆ ಗೊತ್ತಿಲ್ಲ. 4 ನೇ ದಾವಾ ಆಸ್ತಿಯನ್ನು ರುದ್ರಪ್ಪ ಮೇಷ್ಟ್ರು ಒಟ್ಟು ಕುಟುಂಬದ ಜಮೀನುಗಳಿಂದ ಬಂದಂತ ಆದಾಯದಿಂದ ಮತ್ತು ಶಿಕ್ಷಕ ವೃತ್ತಿಯಿಂದ ಹಣವನ್ನು ಒಟ್ಟುಗೂಡಿಸಿ ತನ್ನ ಕಿರಿಯಮಗನ ಹೆಸರಿಗೆ ಕ್ರಯ ಪತ್ರ ಮಾಡಿಸಿಕೊಟ್ಟಿರುತ್ತಾನೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರುದ್ರಪ್ಪನಿಗೆ ಪ್ರತಿ ತಿಂಗಳು ಸಂಬಳ ಬರುತ್ತಿತ್ತು ಅಂತ ನನಗೆ ಗೊತ್ತಿಲ್ಲ. ಅವರ ಒಟ್ಟು ಕುಟುಂಬಕ್ಕೆ ಎಷ್ಟು ಆದಾಯ ಬರುತ್ತಿತ್ತು ಅಂತ ನನಗೆ ಗೊತ್ತಿಲ್ಲ. 4 ನೇ ದಾವಾ ಆಸ್ತಿ ವಾದಿಯರ ಒಟ್ಟು ಕುಟುಂಬದ ಆಸ್ತಿ ಅಂತ ಹೇಳುವುದು ಸುಳ್ಳು ಎಂದರೆ ಸರಿಯಲ್ಲ. 4 ನೇ ದಾವಾ ಆಸ್ತಿಯು ಮೃತ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಆತ ತೀರಿಕೊಂಡ ನಂತರ ಅವರ ಹೆಂಡತಿಯಾದ ಶಿಲ್ಪ ಇವರ ಸ್ವಂತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಮೃತ ಶಶಿಕುಮಾರ್ ಹೆಸರಿಗೆ 4 ನೇ ದಾವಾ ಆಸ್ತಿಯನ್ನು ಒಟ್ಟು ಕುಟುಂಬದ ಪರವಾಗಿ ರುದ್ರಪ್ಪ ಖರೀದಿ ಮಾಡಿಸಿಕೊಟ್ಟಿರುತ್ತಾನೆ ಅಂತ

ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

7. ದಾವಾ ಸ್ವತ್ತು ವಾದಿಯರ ಸ್ವಾಧೀನಾನುಭವದಲ್ಲಿ ಇರುತ್ತದೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರುದ್ರಪ್ಪನ ಒಟ್ಟು ಕುಟುಂಬದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು 2 ನೇ ವಾದಿ ರಂಗಸ್ವಾಮಿ ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು 2 ನೇ ವಾದಿ ರಂಗಸ್ವಾಮಿ ಹೇಳಿ ಬರೆಸಿರುತ್ತಾನೆ ಎಂದರೆ ಸರಿಯಲ್ಲ. 2 ನೇ ವಾದಿ ರಂಗಸ್ವಾಮಿಗೆ ಸಹಾಯವಾಗಲೆಂದು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

<u>**ಪಾಟೀ ಸವಾಲು: ಶ್ರೀ ಎನ್.ಬಿ., 2 ನೇ ಪ್ರತಿವಾದಿ ಪರ ವಕೀಲರಿಂದ**</u>

8. 2 ನೇ ವಾದಿ ರಂಗಸ್ವಾಮಿ ಮತ್ತು ಮೃತ 1 ನೇ ಪ್ರತಿವಾದಿ ಶಶಿಕುಮಾರ್ ಇವರ ತಂಗಿ 2 ನೇ ಪ್ರತಿವಾದಿ ಅನಿತ ಆಗಿರುತ್ತಾಳೆ ಎಂದರೆ ಸರಿ.



ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ಇಲ್ಲಿಯವರೆಗೆ ರುದ್ರಪ್ಪ ಮತ್ತು ಅವರ ಹೆಂಡತಿ ಮಕ್ಕಳುಗಳ ನಡುವೆ ಯಾವುದೇ ಪಾಲುವಿಭಾಗ ಆಗಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ಅನಿತಗೂ ಸಹ ದಾವಾ ಆಸ್ತಿಗಳಲ್ಲಿ ಸಮಭಾಗದ ಹಕ್ಕಿರುತ್ತದೆ ಎಂದರೆ ಸರಿ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.